ಅವನನ್ನು ಸಿದ್ಧಮಾಡುವಷ್ಟರಲ್ಲಿ, ದೈವ ಬೇರೆಯೇ ಬಗೆಯಿತು. ಗದ್ದುಗೆ ಏರಿದ ಕೇವಲ ಆರು ವರ್ಷಗಳಲ್ಲಿ ನಾಯಕ ಅನಾರೋಗ್ಯ ಪೀಡಿತನಾಗಿ ಇಹಲೋಕ ತ್ಯಜಿಸುತ್ತಾನೆ. ಹಾಡುಹಗಲೇ ಸೂರ್ಯ ನಂದಿ ಹೋದನಲ್ಲ ಎಂದು ದುಃಖಿತಳಾಗುತ್ತಾಳೆ ನಾಗತಿ. ಆದರೆ ಪ್ರಜಾಪರಿಪಾಲನೆಯ ಕರ್ತವ್ಯವನ್ನು ಮರೆಯುವವಳಲ್ಲ ಆಕೆ. ರಾಜ ಗುರುಗಳಾದ ಮುರುಘರಾಜೇಂದ್ರ ಸ್ವಾಮಿಗಳ ಸಲಹೆ ಪಡೆದು, ಪ್ರಜಾಚಿಂತಕನಾಗಿದ್ದ ಭರಮಣ್ಣ ನಾಯಕ ಮತ್ತು ಆತನ ಪತ್ನಿ ನಿಂಗವ್ವ ಅವರ ಪುತ್ರ ಮದಕರಿ ನಾಯಕನಿಗೆ ಪಟ್ಟ ಕಟ್ಟುತ್ತಾಳೆ. ಬಾಲಕ ಮದಕರಿಯನ್ನು ದುರ್ಗದ ಅರಸನನ್ನಾಗಿ ಮಾಡಲು ನಾಗತಿ ಶ್ರಮಿಸುತ್ತಾಳೆ. ಶಿಸ್ತು, ಪೂಜೆ ಪುನಸ್ಕಾರ, ಆಡಳಿತ, ಯುದ್ಧ, ಧೈರ್ಯ, ನೈಪುಣ್ಯ, ಕಕ್ಕುಲತೆ ಎಲ್ಲವನ್ನು ಕಲಿಸಿದ ನಾಗತಿ ದೇಶಭಾಗ್ ಪಡೆಯ ಮುಖ್ಯಸ್ಥೆ ರಣ ಹುಚ್ಚಟ್ಟಿಯನ್ನು ನಾಯಕನಿಗೆ ಪರಿಚಯಿಸುತ್ತಾಳೆ. ನಂತರ ಅವರ ವಿವಾಹ ನಡೆಯುತ್ತದೆ.

ಈ ನಡುವೆ ರಾಯದುರ್ಗದವರು ದುರ್ಗದ ಹಸು ಕರುಗಳನ್ನು ಅಪಹರಿಸಿ, ಪಾಪದ ಗೊಲ್ಲರನ್ನು ಹಿಡಿದು, 'ಸಣ್ಣ ಹುಡುಗ ರಾಜ, ಮದಕರಿಯ ಆಡಳಿತ, ದುರ್ಗದಲ್ಲೀಗ ಗಂಡಸರ ದಿಕ್ಕಿಲ್ಲ' ಎಂದು ಕೂಗಾಡುತ್ತಾರೆ. ಈ ಮಾತನ್ನು ಕೇಳಿದ ನಾಗತಿ ರಣವೀಳ್ಯ ಪಡೆದು, ದೇಶಭಾಗ್ ಹುಚ್ಚವ್ವಳ ಮಹಿಳಾ ಸೇನೆಯೊಂದಿಗೆ ಹೊರಡುತ್ತಾಳೆ. ಹೆಣ್ಣು–ಗಂಡು ಎಂದು ತಾರತಮ್ಯ ಮಾಡಿ, ವಿನಾಕಾರಣ ಗೋವುಗಳನ್ನು ಸೆರೆಹಿಡಿದವರಿಗೆ ಸರಿಯಾದ ಪಾಠ ಕಲಿಸುತ್ತಾಳೆ. ರಣಕೇಕೆ ಹಾಕುತ್ತ ಮಹಾಕಾಳಿಯಂತೆ ಹೋರಾಡಿದ ಓಬವ್ವ ನಾಗತಿಯ ಧೈರ್ಯ ಕಂಡು ಮದಕರಿ ನಾಯಕ ಬೆರಗಾಗಿ ಹೋಗುತ್ತಾನೆ.

ರೊಟ್ಟಿ ತಟ್ಟುವ ಕೈಗಳು ಕತ್ತಿ ಹಿಡಿಯುತ್ತವೆ ಎಂಬುದಕ್ಕೆ ಯುದ್ಧ ಸಾಕ್ಷಿಯಾಯಿತು. ಹಸುಗೂಸುಗಳನ್ನು, ವಯಸ್ಸಾದವರನ್ನು ಬಿಟ್ಟು ಬಂದವರಿಗೆ ವೂನ ಕಾಲಿನ ಕುಂಟವ್ವ, ಒಂಟಿ ಕಣ್ಣಿನ ಕಾಳವ್ವಗೆ ಹೂಮಾಲೆ ಹಾಕಿ ನಾಗತಿಯ ಬೆನ್ನ ಹಿಂದೆ ಇದ್ದ ದೇಶಭಾಗ್ ಪಡೆಗೆ ಅಭಿನಂದನೆ ಹೇಳಿದ ನಾಗತಿ, 'ಒಡೆತನ–ಸಿರಿತನ ನನಗಿನ್ನು ಸಾಕು. ಇನ್ನು ಮುಂದೆ ಅದೆಲ್ಲ ನಿಮ್ಮದು' ಎಂದು ಸಮಸ್ತ ಜವಾಬ್ದಾರಿಯನ್ನು ಮದಕರಿ ನಾಯಕನ ತಾಯಿ ನಿಂಗವ್ವ ನಾಗತಿಗೆ ಒಪ್ಪಿಸುತ್ತಾರೆ. ಮದಕರಿ ನಾಯಕನಿಗೆ ಜವಾಬ್ದಾರಿ ವಹಿಸಿ ತನ್ನೆಲ್ಲ ಕೆಲಸ ಮುಗಿಸುತ್ತಾಳೆ. ಬದುಕಿನ ದಾರಿಯನ್ನು ಇಷ್ಟೆಲ್ಲ ಸವೆಸಿದ ಬಳಿಕ ನಾಗತಿ ಒಂದು ದಿನ, 'ಅರಮನೆಯಲ್ಲಿ ಮಗುವಿನ ಅಳು–ನಗು ಕೇಳುವುದು ಯಾವಾಗ ಹೊನ್ನವ್ವ...' ಎಂದು ಹೊನ್ನವ್ವನ ಜೊತೆ ಒಂದೆರಡು ಮಾತನಾಡುತ್ತಾರೆ. 'ನೀನು ಮಾಡಿಕೊಡುವ ತಾಂಬೂಲ ತಿಂದು ಬಹಳ ದಿನಗಳಾದವು. ನಿನ್ನ ತಾಂಬೂಲ ನನ್ನ ಬಾಯಿಗೆ ಬಿದ್ದರೆ ಮತ್ತೆ ನೂರು ವರ್ಷ ಬದುಕಿಯೇನು. ತಂದು ಕೊಡುವೆಯಾ?' ಎಂದು ಕೇಳುತ್ತಾರೆ. 'ಆಗಲಿ ಅವ್ವ, ತಂದೆ' ಎನ್ನುತ್ತಾ ಹೊನ್ನವ್ವ ಕಂಚಿನ ಕುಟ್ಟಣಿಗೆಯ ಸದ್ದು ಮಾಡುತ್ತ ತಾಂಬೂಲ ಸಿದ್ಧಪಡಿಸುತ್ತ ಹಳೆಯ ನೆನಪಿನಲ್ಲಿ ಮುಳುಗಿ ಹೋಗುತ್ತಾಳೆ. ಆಗ 'ಹೊನ್ನವ್ವ' ಎಂದು ಆಕೆ ಕರೆದ ಸದ್ದಾಗುತ್ತದೆ. 'ಅವ್ವ ಬಂದೆ...' ಎನ್ನುತ್ತಾ ತಾಂಬೂಲ ತಂದು ನೋಡಿದರೆ ನಾಗತಿ ಹಾಸಿಗೆಯ ಮೇಲೆ ಕುಳಿತಿದ್ದವರು ಥಟ್ಟನೆ ಬೀಳುತ್ತಾರೆ, ಮತ್ತೆ ಏಳುವುದಿಲ್ಲ. ಇದಾದ ಮೂರನೇ ದಿನಕ್ಕೆ ಕಂಚಿನ ಕುಟ್ಟಣಿಗೆಯನ್ನು ಕೈಯಲ್ಲಿ ಗಟ್ಟಿಯಾಗಿ ಹಿಡಿದೇ ಹೊನ್ನವ್ವ ತೀರಿ ಹೋಗುತ್ತಾಳೆ. ಇಬ್ಬರ ಸಾವು ದುರ್ಗವನ್ನು ಕಣ್ಣೀರಲ್ಲಿ ಮುಳುಗಿಸುತ್ತದೆ. ಓದುಗರಾದ ನಮ್ಮನ್ನು ಕೂಡ... ●

